ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ,
ನವನಗರ, ಪೂ.ಬೆಂ. ರಸ್ತೆ, ಹುಬ್ಬಳ್ಳಿ- 580 025.

Telephone No. : 0836-2223865
: 0836-2223867

HUBLI ELECTRICITY SUPPLY
COMPANY LIMITED

[Wholly owned Govt. of Karnataka undertaking]

Corporate Office,
Navanagar,P.B. Road, Hubli-580 025.

Web Site : www.hescom.co.in
E-mail ID : gmadmhr.hescom@gmail.com

ಕ್ರ.ಸಂ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/PLO-458/18-19/2018-19 CYS-2944. ದಿನಾಂಕ: 2 NOV 2018

## ಸುತ್ತೋಲೆ

ವಿಷಯ: ಹುವಿಸಕಂನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸಮಸ್ಯೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ:
1. ಮುಖ್ಯ ಔದ್ಯಮಿಕ ಭಾಂದವ್ಯ ಅಧಿಕಾರಿ, ಕವಿಪ್ರನಿನಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕವಿಪ್ರನಿನಿ/ ಮುಔಭಾ/ ಬಿ14/907/2000-01 ದಿನಾಂಕ:24.01.2018.
2. ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಅದ್ಯಕ್ಷತೆಯಲ್ಲಿ ವಿದ್ಯುತ್ ಗುತ್ತಿಗೆ ನೌಕರರಿಗೆ ಒದಗಿಸಬಹುದಾದ ಸೌಲಭ್ಯಗಳ ಕುರಿತು ಜರುಗಿದ ಸಭೆಯ ನಡಾವಳಿಗಳ ಪತ್ರ ಸಂಖ್ಯೆ: ಸಿವೈಎಸ್-1800 ದಿನಾಂಕ:20.08.2018.
3. ಈ ಕಛೇರಿ ಪತ್ರ ಸಂಖ್ಯೆ:ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/ PLO-458/18-19/2018-19/CYS-2152 ದಿನಾಂಕ:10.09.2018.
4. ಈ ಕಾರ್ಯಾಲಯದ ಪತ್ರ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/18-19 2018-19/CYS-2498/ದಿನಾಂಕ:28.09.2018.
5. ಕಂಪನಿ ಕಾರ್ಯಾಲಯದ ಸುತ್ತೋಲೆ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-3 PLO-458/18-19/2018-19/CYS-2657/ದಿನಾಂಕ:10.10.2018.
6. ಪಿಎಲ್‌ಓ ಕಡತ ಸಂಖ್ಯೆ:458 ರ ಕಂಡಿಕೆ:37 ರಲ್ಲಿ ದಿನಾಂಕ:01.11.2018 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶ ಅನುಮೋದನೆಗೊಂಡಂತೆ.

**********

ಹುವಿಸಕಂನಿ ವ್ಯಾಪ್ತಿಯಲ್ಲಿ ಒಳಗೊಳ್ಳುವ ಕಛೇರಿಗಳು ಹಾಗು 33 ಕೆ ವ್ಹಿ, ಎಸ್ & ಎಲ್ ಸ್ಟೇಷನ್ ಗಳಲ್ಲಿ ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ನಿಗದಿತ ಅವಧಿಯಲ್ಲಿ ಮಾಸಿಕ ಪರಿಶ್ರಮ ಧನ, ಪಿ ಎಫ್ ವಂತಿಕೆ ಮತ್ತು ಇ ಎಸ್ ಐ ವಂತಿಕೆ ಪಾವತಿಯಾಗದೆ ವಿಳಂಬವಾಗುತ್ತಿರುವುದು ಕಂಪನಿ ಕಾರ್ಯಾಲಯದ ಗಮನಕ್ಕೆ ಬಂದಿರುವುದನ್ನು ಗಮನಿಸಿ ಉಲ್ಲೇಖ(5)ರಲ್ಲಿ ಕಂಪನಿ ಕಾರ್ಯಾಲಯದಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯ ಮುಂದುವರೆದ ಭಾಗವಾಗಿ ಹುವಿಸಕಂನಿ ವ್ಯಾಪ್ತಿಯಲ್ಲಿ ವಿವಿಧ ಹೊರಗುತ್ತಿಗೆ ಸೇವೆಗಳನ್ನು ಹೊರಗಿನ ಏಜೆನ್ಸಿ ಮುಖಾಂತರ ನಿಯಮಾನುಸಾರ ಪಡೆದುಕೊಳ್ಳುತ್ತಿದ್ದು, ಮಾನ್ಯ ಕಾರ್ಮಿಕ ಇಲಾಖೆಯಿಂದ ಸದರಿ ಹೊರಗುತ್ತಿಗೆ ಸೇವೆಗಳಿಗೆ ಕಾಲಕಾಲಕ್ಕೆ ಪರಿಷ್ಕೃತಗೊಳಿಸಲಾಗುವ ಕನಿಷ್ಟ ವೇತನವನ್ನು ನಿಗಧಿಪಡಿಸಿ ಅಳವಡಿಸಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.

(ಪು.ತಿ.ನೋ)

ಮುಂದುವರೆದು ಹುವಿಸಕಂನಿ ವ್ಯಾಪ್ತಿಯಲ್ಲಿನ ಕಛೇರಿ/ಸ್ಟೇಷನ್ ಗಳಲ್ಲಿ ವಿವಿಧ ಸೇವೆಗಳನ್ನು ಸಲ್ಲಿಸುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ನಿಯಮಿತವಾಗಿ ಪರಿಶ್ರಮಧನ, ಇಪಿಎಫ್/ಇಎಸ್ಐ/ಇತರೆ ಸೌಲಭ್ಯಗಳು ಪಾವತಿಯಾಗದೇ ಇರುವ ಕುರಿತು ಅನೇಕ ಮನವಿ/ದೂರುಗಳು ಕಂಪನಿ ಕಛೇರಿಗೆ ನೊಂದ ಕಾರ್ಮಿಕರಿಂದ/ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಷನ್/ಎಐಯುಟಿಯುಸಿ ಮತ್ತು ಎಐಪಿಎಫ್ ಸಂಘಗಳಿಂದ ಅಲ್ಲದೇ ಈ ಸಮಸ್ಯೆಗಳು ಮಾನ್ಯ ಇಂಧನ ಇಲಾಖೆ, ಮಾನ್ಯ ಮುಖ್ಯಮಂತ್ರಿಗಳ ಉಪಕಾರ್ಯದರ್ಶಿ ಯವರ ಕಛೇರಿಗಳಿಗೆ ಸ್ವೀಕೃತವಾಗಿದ್ದು, ಸದರಿ ವಿಷಯವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಿಸಿರುತ್ತಾರೆ.

ಈ ನಿಟ್ಟಿನಲ್ಲಿ ಸದರಿ ಗುತ್ತಿಗೆ ಕಾರ್ಮಿಕರ ದೂರು/ಮನವಿಗಳನ್ನು ಜಿಲ್ಲಾವಾರು ಕಾರ್ಮಿಕರ ಪ್ರತಿನಿಧಿಗಳೊಂದಿಗೆ ವೃತ್ತ ಮಟ್ಟದಲ್ಲಿ ಚರ್ಚಿಸಿ ಇತ್ಯರ್ಥಪಡಿಸಲು ಈ ಕೆಳಕಂಡಂತೆ ಸಮಿತಿ ರಚಿಸಲು ನಿರ್ದೇಶಿತನಾಗಿದ್ದೇನೆ.

1. ಅಧೀಕ್ಷಕ ಅಭಿಯಂತರರು, ಕಾ & ಪಾ ವೃತ್ತ - ಅಧ್ಯಕ್ಷರು.
2. ಉಪ ಲೆಕ್ಕನಿಯಂತ್ರಾಧಿಕಾರಿಗಳು, ಕಾ & ಪಾ ವೃತ್ತ - ಸದಸ್ಯರು.
3. ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ & ಪಾ ವಿಭಾಗ - ಸದಸ್ಯರು.
4. ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನೀಯರ್(ವಿ)33/11 ಕೆವ್ಹಿ ನೋಡಲ್ ಅಧಿಕಾರಿ, ಎಸ್ & ಎಲ್ ವಿಭಾಗ - ಸದಸ್ಯರು.
5. ಸಂಬಂಧಪಟ್ಟ ಲೆಕ್ಕಾಧಿಕಾರಿಗಳು, ಕಾ & ಪಾ ವಿಭಾಗ- ಸದಸ್ಯರು.
6. ಜಿಲ್ಲಾವಾರು ಕಾರ್ಮಿಕರ ಪ್ರತಿನಿಧಿಗಳು - ಸದಸ್ಯರು.( 4 ರಿಂದ 5 ಜನ 33 ಕೆವ್ಹಿ ಸ್ಟೇಷನ್ ಕಾರ್ಮಿಕರ ವತಿಯಿಂದ) ( ಇತರೆ ಸೇವೆಗಳಿಗೆ ಪ್ರತಿ ವಿಭಾಗದಿಂದ ಒಬ್ಬರು) .

ಸದರಿ ಸಮಿತಿಯು ವೃತ್ತ ಮಟ್ಟದಲ್ಲಿ ಆಯಾ ಕಛೇರಿವಾರು ಸ್ವೀಕೃತವಾದ ಅಹವಾಲುಗಳನ್ನು ಪ್ರತಿ ತಿಂಗಳು ದಿನಾಂಕ:11 ರಿಂದ 13 ನೇ ತಾರೀಖಿನೊಳಗಾಗಿ ಸಂಬಂಧಿಸಿದ ಗುತ್ತಿಗೆದಾರರು ಮತ್ತು ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ನಿಯಮಾನುಸಾರ ತಮ್ಮ ಹಂತದಲ್ಲಿ ಇತ್ಯರ್ಥಪಡಿಸುವುದು. ಒಂದು ವೇಳೆ ತಮ್ಮ ಹಂತದಲ್ಲಿ ಇತ್ಯರ್ಥಗೊಳಿಸಲು ಸಾಧ್ಯವಾಗದೇ ಇರುವಂತಹ ಅಹವಾಲುಗಳನ್ನು ಕಂಪನಿ ಕಾರ್ಯಲಯಕ್ಕೆ ತಮ್ಮ ಸೂಕ್ತ ಅಭಿಪ್ರಾಯ ಹಾಗು ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.

ಉಲ್ಲೇಖ(5) ರ ಈ ಕಾರ್ಯಾಲಯದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಹೊರಗುತ್ತಿಗೆ ಏಜೆನ್ಸಿರವರು ತಾವು ಗುತ್ತಿಗೆ ನೇಮಿಸಿಕೊಂಡ ಕಾರ್ಮಿಕರಿಗೆ ಮಾಸಿಕ ಪರಿಶ್ರಮ ಧನವನ್ನು ಪ್ರತಿ ತಿಂಗಳು ತಪ್ಪದೇ 10 ನೇ ತಾರೀಕಿನೊಳಗಾಗಿ ಕಾರ್ಮಿಕರ ಬ್ಯಾಂಕ್ ಸೇವಿಂಗ್ಸ್ ಖಾತೆಗೆ ಹಾಗು ಇಪಿಎಫ್/ಇಎಸ್ಐ ವಂತಿಕೆಯನ್ನು ಸಂಬಂಧಪಟ್ಟ ಕಾರ್ಮಿಕರ ಖಾತೆಗೆ ಜಮಾ ಮಾಡಿರುವ ಕುರಿತು ಹಾಗು 10 ನೇ ತಾರೀಖಿನೊಳಗಾಗಿ ಹಿಂದಿನ ತಿಂಗಳ ಬಿಲ್ಲನ್ನು ಪಾಸು ಮಾಡಿ ನಿಧಿ ಕೋರಿಕೆಯನ್ನು ಕಂಪನಿ ಕಾರ್ಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ಪರಿಶೀಲಿಸಿ, ಚರ್ಚಿಸಿ ಖಚಿತ ಪಡಿಸಿಕೊಳ್ಳುವುದು. ಈ ಎಲ್ಲಾ ವಿಷಯಗಳನ್ನು ಸಭೆಯ ನಡಾವಳಿಗಳಲ್ಲಿ ದಾಖಲಿಸಿ ಸದರಿ ಮಾಹಿತಿಯನ್ನು ಪ್ರತಿ ಮಾಹೆಯ 15 ತಾರೀಖಿನೊಳಗಾಗಿ ನಿಗಮ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು.

ಈ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಜಾರಿಗೊಳಿಸುವುದು.

2/11

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ ಸಂ ಅ)

**ಕರಡು ಪ್ರತಿ**
"ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ."

<u>ಪ್ರತಿ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ:</u>

1. ಮುಖ್ಯ ಇಂಜಿನೀಯರ್(ವಿ), ಕಾ & ಪಾ ವಲಯ, ಹುಬ್ಬಳ್ಳಿ/ಬೆಳಗಾವಿ.
2. ಎಲ್ಲ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತಗಳು, ಹುವಿಸಕಂನಿ.,
3. ಎಲ್ಲಾ ಉಪ ಲೆಕ್ಕನಿಯಂತ್ರಾಣಾಧಿಕಾರಿಗಳು, ಕಾರ್ಯ & ಪಾಲನಾ ವೃತ್ತ, ಹುವಿಸಕಂನಿ
4. ಎಲ್ಲ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗಗಳು, ಹುವಿಸಕಂನಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), 33 ಕೆವ್ಹಿ ಟಿ ಎಲ್ & ಎಸ್ ಎಸ್ ವಿಭಾಗಗಳು, ಹುವಿಸಕಂನಿ
6. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ & ಪಾಲನಾ ವಿಭಾಗಗಳು, ಹುವಿಸಕಂನಿ.

<u>ಪ್ರತಿ ಮಾಹಿತಿಗಾಗಿ:-</u>

1. ನಿರ್ದೇಶಕರು[ಆಡಳಿತ & ಮಾಸಂ], ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಉಪ ಕಾರ್ಯದರ್ಶಿ[ಆಡಳಿತ], ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.
4. ಆರ್ಥಿಕ ಸಲಹೆಗಾರರು(ಆಂ ಪ), ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
5. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನೀಯರ್(ವಿ), ಟಿ. & ಪಿ. ಶಾಖೆ, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
7. ಲೆಕ್ಕಾಧಿಕಾರಿ[ಆಂತರಿಕ ನಿರ್ವಹಣೆ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
8. ಎಲ್ಲಾ ಲೆಕ್ಕಾಧಿಕಾರಿಗಳು[ಆಂ.ಪ], ಹುವಿಸಕಂನಿ.
9. ಹಿರಿಯ ಆಪ್ತ ಕಾರ್ಯದರ್ಶಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮೇಲ್ಕಾಣಿಸಿದ ವಿಷಯದ ಕುರಿತು ದಯಾಪರರ ಅವಗಾಹನೆಗೆ ತರಲು ಕೋರಿದೆ.
10. ಆಪ್ತ ಕಾರ್ಯದರ್ಶಿ, ಮುಖ್ಯ ಆರ್ಥಿಕ ಅಧಿಕಾರಿಗಳು, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮೇಲ್ಕಾಣಿಸಿದ ವಿಷಯದ ಕುರಿತು ದಯಾಪರರ ಅವಗಾಹನೆಗೆ ತರಲು ಕೋರಿದೆ.
11. ಅಧ್ಯಕ್ಷರು, ಕೆ.ಎಸ್.ಇ.ಡಬ್ಲೂ.ಎಫ್, ಸೂರಿ ಭವನ, ನಂ: 40/5, 2ನೇ ಮುಖ್ಯ 16ನೇ ಕ್ರಾಸ್, ಸಂಪಂಗಿರಾಮ ನಗರ, ಬೆಂಗಳೂರು-27.
12. ಪ್ರಧಾನ ಕಾರ್ಯದರ್ಶಿ, ಕ ವಿ ಸ ಕಂ ಗು ನೌ ಸಂಘ ಹಾಗು ಎಐಯುಟಿಯುಸಿ ಮತ್ತು ಎಐಪಿಎಫ್, ಸನ್ಮತಿ ರಸ್ತೆ, ಎನ್ ಟಿ ಟಿ ಎಫ್ ಹತ್ತಿರ, ಧಾರವಾಡ.